ಆಯುರ್ವೇದ ಡಾಕ್ಟರ್‌ಗಳಿಗೆ ನಾವು ಈಗ 6000 ರೂ.ಗಳನ್ನು ಕೊಡುತ್ತಿದ್ದೇವೆ. ಅದು ಬಹಳ ಕಡಿಮೆಯಾಗಿದೆ, ನಮಗೂ ತಾರತಮ್ಯವಾಗಿದೆ ಎಂದು ಅವರು ಬರುವಂಥ ಸ್ಥಿತಿಯಲ್ಲಿ ಇಲ್ಲ. ಅವರಿಗೂ ಸ್ವಲ್ಪ ಜಾಸ್ತಿ ಅಂದರೆ 8 ರಿಂದ 9 ಸಾವಿರ ರೂ.ಗಳನ್ನು ಮಾಡಿ ಅವರಿಗೆ ಕೊಡಬೇಕೇ ಎನ್ನುವುದು ಸರ್ಕಾರದ ಚಿಂತನೆಯಾಗಿದೆ. ಒಂದು ತಿಂಗಳೊಳಗೆ ಗುತ್ತಿಗೆ ಆಧಾರದ ಮೇಲೆ ಕೆಲಸವನ್ನು ಮಾಡುವವರಿಗೆ ಸಂಬಳವನ್ನು ಜಾಸ್ತಿ ಮಾಡುವುದರ ಬಗ್ಗೆ ಚಿಂತನೆ ಸರ್ಕಾರದ ಮುಂದೆ ಇದೆ. ಇದು pay commission ಮುಂದೆ ಇರುವುದರಿಂದ ನಾವು ಅವರಿಗೆ ಹೆಚ್ಚಿಗೆ ಸಂಬಳ ಕೊಡುವುದರಲ್ಲಿ ಸರ್ಕಾರದಿಂದ ಎರಡು ಮಾತಿಲ್ಲ ಎಂಬುದನ್ನು ನಾವು ಒಪ್ಪಿದ್ದೇವೆ. ನಾವು ಮಾಡುತ್ತೇವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಗೋಪಾಲಕೃಷ್ಣ ಬೇಳೂರು: ಮಾನ್ಯ ಅಧ್ಯಕ್ಷರೆ, ಆರೋಗ್ಯ ರಕ್ಷಾ ಸಮಿತಿಯಿಂದ ತಾವು ಹೊರಗಡೆಯಿಂದ ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟರೆ ತೆಗೆದುಕೊಳ್ಳಬಹುದಲ್ಲವೇ? (ಡಿ) ಗ್ರೂಪ್ ನೌಕರರನ್ನು ಪ್ರೈವೇಟಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ ಅನುಕೂಲವಾಗಬಹುದು.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, 30% ಎಲ್ಲಿ ಡಿ ಗ್ರೂಪ್ ಕೊರತೆ ಇದೆ ಅವರು ಈ cleaning facility out source ಮಾಡುವುದಕ್ಕೆ ಅನುಮತಿಯನ್ನು ಮಾತ್ರ ಕೊಟ್ಟಿದೆ. 30% ಇದ್ದರೆ ಮಾತ್ರ ಅನುಮತಿ ಸಿಗುತ್ತದೆ. ಆದ್ದರಿಂದ ಪ್ರೈವೇಟ್‌ನವರು ಈ cleaning ವ್ಯವಸ್ಥೆಯನ್ನು ಮಾಡಿಕೊಂಡು ಡಿ–ಗ್ರೂಪ್ ನೌಕರರು ಮಾಡುವ ಕೆಲಸವನ್ನು ಮಾಡಬೇಕೆಂದು ಈಗಾಗಲೇ ಸರ್ಕಾರದಿಂದ ಆದೇಶವನ್ನು ಮಾಡಿದ್ದೇವೆ.

ಬೀಡಿ ಕಾರ್ಮಿಕರಿಗೆ ವಸತಿ ಯೋಜನೆ

112 (326) : ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಎಂಎಲ್‌ಎ: ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ ಬೀಡಿ ಕಾರ್ಮಿಕರಿಗೆ ವಸತಿ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ;

ಆ) 1) ಹೌದಾದಲ್ಲಿ ಯೋಜನೆಯ ಮಾನದಂಡವೇನು;

2) ತುಮಕೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ; (ವಿವರ ನೀಡುವುದು)

ಇ) ವಸತಿ ನಿರ್ಮಾಣಕ್ಕಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಈ ಪೈಕಿ ಯೋಜನೆಯ ಫಲಾನುಭವಿಗಳ ಸಂಖ್ಯೆ ಎಷ್ಟು;

ಈ) ಉಳಿದ ಅರ್ಜಿಗಳ ಬಗ್ಗೆ ವಸತಿ ನಿರ್ಮಿಸಿಕೊಡಲು ಸರ್ಕಾರದ ನಿಲುವೇನು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ರಾಜ್ಯ ಸರ್ಕಾರವು ಬೀಡಿ ಕಾರ್ಮಿಕರಿಗಾಗಿ ಯಾವುದೇ ಪ್ರತ್ಯೇಕವಾದ ಯೋಜನೆಯನ್ನು ಜಾರಿಗೊಳಿಸಿರುವುದಿಲ್ಲ. ಆದರೆ, ಕೇಂದ್ರ ಸರ್ಕಾರವು ಬೀಡಿ ಕಾರ್ಮಿಕರಿಗಾಗಿ ರೂಪಿಸಿರುವ ಸಮಗ್ರ ವಸತಿ ಯೋಜನೆಯನ್ನು ರಾಜ್ಯ ಸರ್ಕಾರದ ಸಹಕಾರದೊಂದಿಗೆ ಜಾರಿಗೊಳಿಸಲಾಗುತ್ತಿದೆ.

ಆ) ಕೆಳಕಂಡ ಷರತ್ತುಗಳನ್ನು ಪೂರೈಸಿದ ಬೀಡಿ ಕಾರ್ಮಿಕರು ಈ ಯೋಜನೆಯಡಿ ಲಭ್ಯವಿರುವ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ:

1) ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಬೀಡಿ ಉದ್ದಿಮೆಯ ಕೆಲಸದಲ್ಲಿ ತೊಡಗಿರಬೇಕು. ಹಾಗೂ ಅವರ ಮಾಸಿಕ ಆದಾಯ ರೂ. 3500–00 ಕ್ಕಿಂತ ಹೆಚ್ಚಾಗಿರಬಾರದು.

2) ಬೀಡಿ ಕಾರ್ಮಿಕರು ಇವರ ಪತ್ನಿ ಅಥವಾ ಗಂಡ ಅಥವಾ ಇವರ ಅವಲಂಬಿತರ ಹೆಸರಿನಲಿ ಸ್ವಂತ ಮನೆಯನ್ನು ಹೊಂದಿರಬಾರದು.

3) ನಿವೇಶನವಿಲ್ಲದಿರುವ ಬೀಡಿ ಕಾರ್ಮಿಕರ ಪೈಕಿ, 50 ಮಂದಿ ಕಾರ್ಮಿಕರಿಗೆ ಕಡಿಮೆ ಇಲ್ಲದ ಸಂಖ್ಯೆಯಲ್ಲಿ ಸದಸ್ಯತ್ವವನ್ನು ಹೊಂದಿರುವ ಸಹಕಾರ ಗುಂಪು ವಸತಿ ಸೊಸೈಟಿಯನ್ನು ರಚಿಸಿರಬೇಕು ಹಾಗೂ ಇಂತಹ ಸಂಘವು ನಿಬಂಧಕರು, ಸಹಕಾರ ಸಂಘಗಳ ಇಲಾಖೆಯೊಂದಿಗೆ ನೊಂದಾಯಿಸಿರಬೇಕು. ಅಲ್ಲದೆ, ಇಂತಹ ಸಂಘದ ಮುಖಾಂತರ 'ಆಶ್ರಯ ಯೋಜನೆ' ಯಡಿ ಅಥವಾ ಗೃಹ ಮಂಡಳಿಯಿಂದ ನಿವೇಶನ ಇಲ್ಲದಿರುವ ಕಾರ್ಮಿಕರುಗಳು ನಿವೇಶನವನ್ನು ಪಡೆಯಲು ಅವಕಾಶವಿರುತ್ತದೆ.

4) ವೆಚ್ಚ: ಕಟ್ಟಡ, ನಿರ್ಮಾಣ ವೆಚ್ಚ, ನಿವೇಶನದ ವೆಚ್ಚ ಮತ್ತು ಕೂಲಿ ವೆಚ್ಚವು ಸೇರಿದಂತೆ ಒಟ್ಟು ವೆಚ್ಚವು ಗರಿಷ್ಟ ಒಂದು ಲಕ್ಷ ರೂಪಾಯಿಯ ಮಿತಿಯನ್ನು ಮೀರುವಂತಿಲ್ಲ.

5) ಬೀಡಿ ಕಾರ್ಮಿಕರು ಅವರ ಹೆಸರಿನಲ್ಲಿ ಅಥವಾ ಅವರ ಕುಟುಂಬದ ಸದಸ್ಯರ ಹೆಸರಿನಲ್ಲಿ ಸ್ವಂತ ಜಮೀನು ಹೊಂದಿದ್ದಲ್ಲಿ, ಅವರಿಗೂ

ಕೂಡ ಮನೆ ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅಂತಹ ನಿವೇಶನ 60 ಚದರ ಗಜಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಆದರೆ, ನಿರ್ಮಾಣ ಮಾಡಿದ ಮನೆಯ ಒಟ್ಟು ವಿಸ್ತೀರ್ಣ 20 ಚದುರ ಮೀಟರ್ ಒಳಗೊಂಡಿದ್ದಲ್ಲಿ, ರೂ. 40,000/–ಗಳ ಧನ ಸಹಾಯವನ್ನು ಪ್ರತಿ ಕಾರ್ಮಿಕರಿಗೆ ನೀಡಲಾಗುತ್ತಿದೆ.

2) ಹೌದು. ವಿವರಗಳು ಈ ಕೆಳಕಂಡಂತೆ ಇರುತ್ತದೆ. 10 (ಹತ್ತು) ಅರ್ಜಿಗಳನ್ನು ತುಮಕೂರು ಕಾರ್ಮಿಕ ಅಧಿಕಾರಿಗಳ ಕಛೇರಿಯಲ್ಲಿ ಸ್ವೀಕರಿಸಲಾಗಿದ್ದು, ಅವುಗಳನ್ನು ಸರ್ಕಾರದ ಮುಖಾಂತರ ದಿನಾಂಕ 28–7–2006ರಂದು ಕೇಂದ್ರ ಸರ್ಕಾರದ ಮಹಾ ನಿರ್ದೇಶಕರು, ಕಾರ್ಮಿಕ ಕಲ್ಯಾಣ ಸಂಸ್ಥೆ, ನವದೆಹಲಿಗೆ ಈ ಬಗ್ಗೆ ಸಹಾಯಧನದ ಮಂಜೂರಾತಿಗಾಗಿ ಕಳುಹಿಸಿ ಕೊಡಲಾಗಿದೆ.

ಇ) ಈ ಯೋಜನೆಯಡಿ ವಸತಿ ನಿರ್ಮಾಣಕ್ಕಾಗಿ ಬಂದ ಒಟ್ಟು ಅರ್ಜಿಗಳ ಸಂಖ್ಯೆ 1091.

ಸೌಲಭ್ಯ ಪಡೆದುಕೊಂಡಿರುವ ಫಲಾನುಭವಿಗಳ ಸಂಖ್ಯೆ: 607.

(ಬೆಂಗಳೂರು ನಗರ –196 ಮತ್ತು ಬೆಂಗಳೂರು ಗ್ರಾಮಾಂತರ –411)

ಈ) ಕೇಂದ್ರ ಸರ್ಕಾರದಿಂದ ಮಂಜೂರಾತಿಯು ಬಂದ ಕೂಡಲೇ ಇನ್ನುಳಿದ ಕಾರ್ಮಿಕರಿಗೆ ವಸತಿ ಗೃಹಗಳ ನಿರ್ಮಾಣವನ್ನು ಕೈಗೊಳ್ಳಲಾಗುವುದು.

ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ: ಮಾನ್ಯ ಅಧ್ಯಕ್ಷರೆ, ಈ ಯೋಜನೆಯನ್ನು ರಾಜ್ಯ ಸರ್ಕಾರದ ಸಹಕಾರದಿಂದ ಜಾರಿಗೊಳಿಸಲಾಗುತ್ತಿದೆ ಎನ್ನುವ ಉತ್ತರ ಇದೆ. ರಾಜ್ಯ ಸರ್ಕಾರದ contribution ಇದರಲ್ಲಿ ಏನು ಇದೆ ಎನ್ನುವುದು ಒಂದು ಉಪ ಪ್ರಶ್ನೆ. ತುಮಕೂರು ಜಿಲ್ಲೆಯಲ್ಲಿ ಈ ಯೋಜನೆಯ ಅಡಿಯಲ್ಲಿ ಸುಮಾರು 10 ಫಲಾನುಭವಿಗಳ ಅರ್ಜಿ ವಿಲೆಯಾಗದೇ, ಇದು ಸುಮಾರು ವರ್ಷಗಳಿಂದ ಇತ್ಯರ್ಥವಾಗದೇ, ಬಾಕಿ ಇವೆ. ಇದು ಯಾವಾಗ ವಿಲೆಯಾಗುತ್ತದೆ. ಇದು ಎರಡನೆಯ ಉಪ ಪ್ರಶ್ನೆ. ಇನ್ನೊಂದು ಪ್ರಮುಖವಾದದ್ದು ಎಂದರೆ, ಈ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಏನು ಗುರುತು ಮಾಡಿದ್ದಾರೆ, ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿದ್ದಾರೆ. ತಮಗೂ ಎಲ್ಲಾ ಗೊತ್ತಿದೆ, ಬೀಡಿ ಕಟ್ಟತಕ್ಕಂಥವರು ಬೀಡಿ ಉದ್ಯಮದಲ್ಲಿ ಜೀವನ ಸಾಗಿಸತಕ್ಕಂಥವರು South Canara ಮತ್ತು North Canara ಈ ಭಾಗದಲ್ಲಿ ಮತ್ತು ನಮ್ಮ ಭಾಗದಲ್ಲಿ ಹೆಚ್ಚು ಜನರು ಇದ್ದಾರೆ. ಆ ಭಾಗದಲ್ಲಿರತಕ್ಕಂಥ ಒಬ್ಬ ಫಲಾನುಭವಿ ಕೂಡ ಈ ಒಂದು

ಪಟ್ಟಿಯಲ್ಲಿ ಕಾಣುತ್ತಿಲ್ಲ. ಈ ಯೋಜನೆ ಅಲ್ಲಿ ಜಾರಿ ಮಾಡದಿರುವುದಕ್ಕೆ ಏನು ಕಾರಣ ಎನ್ನುವುದರ ಬಗ್ಗೆ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ: ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಮಾನ್ಯ ರಾಜಣ್ಣನವರು ಕೇಳಿರುವಂಥ ಪ್ರಶ್ನೆಗೆ, ಇದು ಕೇಂದ್ರ ಸರ್ಕಾರದ ಒಂದು ಯೋಜನೆ, ಇದರಲ್ಲಿ ರಾಜ್ಯ ಸರ್ಕಾರದ ಆರ್ಥಿಕವಾದ ಯಾವ ಸಹಭಾಗಿತ್ವ ಇಲ್ಲ. ಇದು ಕೇಂದ್ರ ಸರ್ಕಾರ ಬೀಡಿ ಕಾರ್ಮಿಕರಿಗೆ ಮನೆಗಳನ್ನು ಕೊಡುವಂಥ ಒಂದು ಯೋಜನೆ, ಅದರಲ್ಲಿ ರೂ. 3500 ಕ್ಕಿಂತ ಮಾಸಿಕ ವೇತನ ಹೆಚ್ಚಿರಬಾರದು. ಅಂಥವರನ್ನು ಪರಿಗಣಿಸಲಾಗುತ್ತಿದೆ. ಕನಿಷ್ಠ ಒಂದು ವರ್ಷವಾದರೂ ಆ ಒಂದು ಉದ್ಯಮದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರಬೇಕಾಗುತ್ತದೆ. ಆ ಮನೆಯನ್ನು ಅವರು ಏನು ಕಟ್ಟುತ್ತಾರೆ, ಅದರ ವೆಚ್ಚ ಒಂದು ಲಕ್ಷ ಮೀರಬಾರದು. ಅಂತಹವರು ಅರ್ಜಿಗಳನ್ನು ಸ್ವೀಕರಿಸಿಕೊಂಡು ಇದು ಕೇಂದ್ರ ಸರ್ಕಾರ ಕಾರ್ಮಿಕ ಇಲಾಖೆಗೆ ಅರ್ಜಿಗಳನ್ನು ಕೊಡುತ್ತದೆ ಅಲ್ಲಿ ಫಲಾನುಭವಿಗಳು ಬಂದು ಆ farm ನ್ನು ತುಂಬಿದ ನಂತರ ಸಂಬಂಧಪಟ್ಟಂಥ ಅಧಿಕಾರಿಗಳು ಈ ಒಂದು ಕ್ಲಾಸ್ ಏನು ಇದೆ ಅದರೊಳಗಡೆ ಬರುತ್ತಾರೆ. ಅವರನ್ನು ಗುರುತಿಸಿಕೊಂಡು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತಾರೆ, ನಂತರ ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ 1091 ಅರ್ಜಿಗಳು ನಮಗೆ ಸ್ವೀಕೃತಿಯಾಗಿವೆ. ನಾವು ಅದರಲ್ಲಿ 607 ಫಲಾಭವಿಗಳಿಗೆ 2,442,80,000 ರೂ.ಗಳನ್ನು ಕೊಟ್ಟಿದ್ದೇವೆ. ಒಂದು ಮನೆಗೆ 40 ಸಾವಿರ ರೂ.ಗಳಂತೆ ಸಹಾಯಧನವಾಗಿ ಕೇಂದ್ರ ಸರ್ಕಾರ subsidy ಯಾಗಿ ಕೊಡುತ್ತದೆ. Rajeev Gandhi Housing Corporation ಏನಿದೆ, ಅದೊಂದು Nodal Agency ಯಾಗಿ ಕೆಲಸವನ್ನು ಮಾಡುತ್ತದೆ. ರಾಜ್ಯ ಸರ್ಕಾರದಿಂದ ಯಾವುದೇ ಯೋಜನೆ ಇಲ್ಲವೆಂದು ತಿಳಿಸಲಿಕ್ಕೆ ಬಯಸುತ್ತೇನೆ. ಇನ್ನು 484 ಅರ್ಜಿಗಳು ಕೇಂದ್ರ ಸರ್ಕಾರದಲ್ಲಿ ಉಳಿದಿವೆ. ಅಲ್ಲಿಂದ ಬಂದ ತಕ್ಷಣ ತಾವು ಕೇಳಿರುವ ಪ್ರಶ್ನೆಗೆ ತುಮಕೂರು ಜಿಲ್ಲೆಯಿಂದ 11 ಅರ್ಜಿಗಳು ಬಂದಿವೆ. ಅದು ಅಲ್ಲಿಗೆ ಹೋಗಿದೆ, ಬಂದ ತಕ್ಷಣ ಆ ಫಲಾನುಭವಿಗಳಿಗೂ ಸಹಿತ ಕೊಡಲಾಗುತ್ತದೆ. ತಾವು ಹೇಳಿದ ಹಾಗೆ South Canara ಆ Costal ಏರಿಯಾದಲ್ಲಿ ಮತ್ತು ಮೈಸೂರು ಭಾಗದಲ್ಲಿ ಹೆಚ್ಚಿಗೆ ಕಾರ್ಮಿಕರು ಇರುವುದರಿಂದ ನಾನು ರೂ. 3500 ಎಂದು ಏನು ಹೇಳಿದೆ, ಬಹುಶ ಆ ಮಿತಿಯಲ್ಲಿ ಇವರು ಬಂದಿರಲಿಕ್ಕಿಲ್ಲ. ಮನೆ ಕಟ್ಟುವುದು ಇರಬಹುದು, ಒಂದು ಲಕ್ಷಕ್ಕಿಂತ ಮೇಲೆ ಹೋಗಿರಬಹುದು, ಇಂತಹ ನಾನಾ ತರಹದ reason ಗಳು

ಇರುತ್ತವೆ, ಅದಕ್ಕೋಸ್ಕರ ಇಲ್ಲಿ ಹೆಚ್ಚಿಗೆ ಆಯ್ಕೆಯಾಗಿವೆ. ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆಯ್ಕೆ ಮಾಡಿ ಒಳ್ಳೆಯ ರೀತಿಯಿಂದ ಅಧಿಕಾರಿಗಳು ಪರಿಶೀಲನೆ ಮಾಡಿ ಇಲ್ಲಿ ಕಳುಹಿಸಿದ್ದಾರೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ: ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರ ಕಳಕಳಿಯನ್ನು ಪ್ರಶ್ನೆ ಮಾಡುತ್ತಿಲ್ಲ. ನನ್ನ ಪ್ರಶ್ನೆ ಏನೆಂದರೆ, ಜಿಲ್ಲಾ ಮಟ್ಟದಲ್ಲಿ ಬರತಕ್ಕಂಥ ಕಾರ್ಮಿಕ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳಲ್ಲಿ ಇದರಲ್ಲಿ ಅನ್ಯೋನ್ಯತೆ ಕಾಣುತ್ತಿಲ್ಲ. ಒಬ್ಬರ ಮೇಲೆ ಒಬ್ಬರು ಜವಾಬ್ದಾರಿಯನ್ನು ಹೊರಿಸಿ, ಜಿಲ್ಲಾಮಟ್ಟದಲ್ಲಿರುವ ಅಧಿಕಾರಿಗಳಲ್ಲಿ ಸಾಮರಸ್ಯ ಇಲ್ಲದಿರುವುದರಿಂದ ನಿಧಾನವಾಗುತ್ತಿದೆ. ಇದರ ಬಗ್ಗೆ ಮಾನ್ಯ ಸಚಿವರು ಗಮನ ಹರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ: ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಡಿ.ಆರ್. ಪಾಟೀಲರೆ ಸಮಯವಾಗಿ ಹೋಯಿತು.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಇದರ ಸಮಸ್ಯೆ ಎಲ್ಲಾ ಕ್ಷೇತ್ರದಲ್ಲಿಯೂ ಇದೆ. ಈ ಬೀಡಿ ಕಾರ್ಮಿಕರನ್ನು contract producer ಎಂದು ಹೇಳಿ ಮಾಲೀಕರು ಟ್ರೀಟ್ ಮಾಡುತ್ತಿದ್ದಾರೆ. contract producers ಗೆ ಈ ಸೌಲಭ್ಯವಿಲ್ಲವೆಂದು ಕೇಂದ್ರ ಸರ್ಕಾರದವರು ಹೇಳುತ್ತಿದ್ದಾರೆ. ದಯವಿಟ್ಟು ಈ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು contract producersದೆರನ್ನು ಕೂಡ ಬೀಡಿ ಕಾರ್ಮಿಕರು ಎಂದು recognize ಮಾಡಿ ಇಲ್ಲಿ ವಸತಿ ಯೋಜನೆ ಸಿಗುವ ಹಾಗೆ ಮಾಡುವಿರಾ?

ಶ್ರೀ ಸಿಂಧೂರ ರಾಜಶೇಖರ: ಮಾನ್ಯ ಅಧ್ಯಕ್ಷರೆ, ಒಂದೆರಡು ಮಾತುಗಳನ್ನು ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಾನು ಬೀಡಿ ಕಂಪನಿಯ ಮಾಲೀಕನಾಗಿರುವುದರಿಂದ ಈ ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಕಳೆದ 25 ವರ್ಷಗಳಿಂದ ಸರ್ವೆ ಮಾಡಿ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿದ್ದೇವೆ. ನಮ್ಮಲ್ಲಿ ಸುಮಾರು 800 ಜನ ಕಾರ್ಮಿಕರು ಕೆಲಸವನ್ನು ಮಾಡುತ್ತಿದ್ದು ಅದರಲ್ಲಿ 80 ಜನರು ನಿವೃತ್ತಿಯಾಗಿದ್ದರೂ ಕೂಡ ಅವರಿಗೆ ಇವತ್ತಿನವರೆಗೂ ಒಂದು ಕುಂಟು ನೆಪಹಾಕಿ ಒಂದು ಮನೆಯು ಆಗಿರುವುದಿಲ್ಲ. ಮಾನ್ಯ ಸದಸ್ಯರಾದ ಡಿ.ಆರ್. ಪಾಟೀಲ್‌ರವರು ಹೇಳಿದಹಾಗೆ ಈ pass book holdersನ್ನು ತೆಗೆದು contract basic ಕೊಡುವುದರಿಂದ

ಅವರು ಸಹ ಬೀಡಿ ಕಾರ್ಮಿಕರೆಂದು ಹೇಳಿ ಅವರನ್ನು ಪರಿಗಣಿಸಿದರೆ ಮಾತ್ರ ಈ ಒಂದು ಕಾರ್ಯಕ್ರಮ ಯಶಸ್ವಿಯಾಗುತ್ತದೆ. ಅದಕ್ಕಾಗಿ ಮಾನ್ಯ ಸಚಿವರು ಇದನ್ನು ಗಮನಿಸಬೇಕೆಂದು ಕೇಳುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ: ಹಿರಿಯ ಸದಸ್ಯರಾದ ಮಾನ್ಯ ಡಿ.ಆರ್. ಪಾಟೀಲ್‌ರವರ ಪ್ರಕಾರ contract producers ಎಂದು ಅವರನ್ನು ಪರಿಗಣಿಸಲಾಗುತ್ತಿದೆ. ನಾನು ಈ ಮುಂಚೆ ಹೇಳಿದ ಪ್ರಕಾರ, ಇದು ಕೇಂದ್ರ ಸರ್ಕಾರದ ಯೋಜನೆಯಾಗಿರುತ್ತದೆ. ಆ normsನ ಅಡಿಯಲ್ಲಿ ಇದು ಬರುವುದಿಲ್ಲ. ನಾವು employees ಎಂದು ಪರಿಗಣಿಸಬೇಕು. ಕಾರ್ಮಿಕರು ಎಂದು ಪರಿಗಣಿಸಿ, ಅವರಿಗೆ 3500 ರೂಪಾಯಿಗಳಿಗಿಂತ ಹೆಚ್ಚಿನ ವೇತನ ಆಗಬಾರದು. ಬಹುಶ: ಈ ರೀತಿಯಾದ ಯೋಜನೆಯು, ಅದರಲ್ಲಿ ಬರುವುದಿಲ್ಲ. ಆದರೆ ತಾವು ಹೇಳಿದ ಪ್ರಶ್ನೆ ಬಗ್ಗೆ ನಾನು ತಕ್ಷಣ ಪರಿಶೀಲನೆ ಮಾಡಿ ಅದು ಏನಿದೆ ಎಂದು ನೋಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್: ಇದು ಕೇಂದ್ರ ಸರ್ಕಾರದ

ಅಧ್ಯಕ್ಷರು: ಮಾನ್ಯ ಪಾಟೀಲ್‌ರವರೆ, ತಾವು ಎಷ್ಟು ಹೇಳಿದರೂ ಕೂಡ ಅಷ್ಟೇ. ಆಯಿತು, ಮಾನ್ಯ ಕೃಷ್ಣಭೈರೇಗೌಡರೆ, ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಡಿ.ಆರ್. ಪಾಟೀಲ್: ಸಾರ್ ಒಂದು ನಿಮಿಷ. ಆ contract producers employee ಎಂದು treat ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತಂದು ಆ criteriaವನ್ನು ಬದಲು ಮಾಡಬೇಕು.

ಶ್ರೀ ಇಕ್ಬಾಲ್ ಅನ್ಸಾರಿ: ಇದನ್ನು ನಾನು ತಮಗೆ ಹೇಳಿದ್ದೆ, ಈಗ ಅವರನ್ನು contract labours ಎಂದು ಅವರನ್ನು ಪರಿಗಣಿಸಿಲ್ಲ. ಇದರ norms ಏನಿದೆ it is applicable to all Beedi workers. ಅದು ಏತಕ್ಕೆ ಪರಿಗಣಿಸಿಲ್ಲ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು: ಏನಪ್ಪಾ ಅಂದರೆ ನೀವು ಅವರ ಮೇಲೆ ಒತ್ತಡವನ್ನು ಹಾಕುತ್ತಿದ್ದೀರಿ. ಅವರು clear ಆಗಿ ಹೇಳುತ್ತಿದ್ದಾರೆ. ನೀವು ಎಷ್ಟು ಹೇಳಿದರೂ ಕೂಡ ಮತ್ತೆ ಮತ್ತೆ ಅದನ್ನೇ ಕೇಳಿದರೆ ಹೇಗೆ?

ಶ್ರೀ ಡಿ.ಆರ್. ಪಾಟೀಲ್: ಕೇಂದ್ರ ಸರ್ಕಾರವನ್ನು ಅದಕ್ಕೆ ಒಪ್ಪಿಸಿ, ಆ criteria ವನ್ನು ಬದಲು ಮಾಡಿಸಬೇಕು. Contract producers are also treated as employees ಎಂದು ಆದರೆ ಸಾಕು.

ಶ್ರೀ ಇಕ್ಬಾಲ್ ಅನ್ಸಾರಿ: ಇದರಲ್ಲಿ ನಮ್ಮ ಪಾತ್ರ ಏನಿದೆ, ನಾನು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಂಡು, ಕೇಂದ್ರ ಸರ್ಕಾರದ ಕಾರ್ಮಿಕರ ಸಚಿವರ ಜೊತೆ ಕುಳಿತುಕೊಂಡು ಇದನ್ನು ಬದಲಾಯಿಸುವುದಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತೇನೆ. ಪರಿಶೀಲನೆ ಎಂದರೆ ಕ್ರಮ ತೆಗೆದುಕೊಳ್ಳುತೇನೆ ಎಂದು ಅರ್ಥ.

ಶ್ರೀ ಸಿಂಧೂರ ರಾಜಶೇಖರ: ಇದರ ಬಗ್ಗೆ ಬೀಡಿ ಕಾರ್ಮಿಕರ ಜೊತೆ ಚರ್ಚೆ ಮಾಡಿದರೆ ಈ ವಿಷಯ ನಮಗೆ ಗೊತ್ತಾಗುತ್ತದೆ.

ಅಧ್ಯಕ್ಷರು: ಮಾನ್ಯ ಕೃಷ್ಣಭೈರೇಗೌಡರವರೆ ತಮ್ಮದು ಕೊನೆಯ ಪ್ರಶ್ನೆ.

ನೂತನ ವಸತಿ ನಿಲಯಗಳ ಸ್ಥಾಪನೆ

113 (530) ಶ್ರೀ ಕೃಷ್ಣ ಬೈರೇಗೌಡ ಸಿ.ಬಿ. (ವೇಮಗಲ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲಾ ವೇಮಗಲ್ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳ ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗಗಳ ನೂತನ ವಸತಿ ನಿಲಯಗಳ ಸ್ಥಾಪನೆಗೆ ಹಾಗೂ ಹಾಲಿ ವಸತಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಸರ್ಕಾರಕ್ಕೆ ಬಂದಿರತಕ್ಕಂತಹ ಪ್ರಸ್ತಾವನೆಗಳೆಷ್ಟು;

ಆ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ವಸತಿ ನಿಲಯಗಳಿಗೆ ಬೇಕಾದ ಸೌಲಭ್ಯಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) **ಸಮಾಜ ಕಲ್ಯಾಣ ಇಲಾಖೆ :**

ಕೋಲಾರ ಜಿಲ್ಲೆಯ ವೇಮಗಲ್ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 2 ಮೆಟ್ರಿಕ್ ಪೂರ್ವ ಬಾಲಕರ ಹಾಗೂ 3 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ಹೊಸದಾಗಿ ಪ್ರಾರಂಭಿಸಲು ಪ್ರಸ್ತಾವನೆಗಳು ಬಂದಿರುತ್ತವೆ.

ಸರ್ಕಾರಿ ವಿದ್ಯಾರ್ಥಿನಿಲಯ, ನರಸಾಪುರದ ಕಟ್ಟಡ ನಿರ್ಮಾಣ ಕೈಗೊಳ್ಳಲು ಪ್ರಸ್ತಾವನೆ ಬಂದಿದ್ದು, ಅದಕ್ಕಾಗಿ ನಿವೇಶನ ಪಡೆಯಲು ಕ್ರಮವಹಿಸಲಾಗಿದೆ. ನಿವೇಶನ ಲಭ್ಯವಾದ ನಂತರ ಕಟ್ಟಡ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.